ಸಾಕ್ಷಿದಾರನನ್ನು ಕರೆಸಿ ಪ್ರಮಾಣೀಕರಿಸಲಾಯಿತು. ಪ್ರ.ಮಾ.ದಿಃ 26.09.2022.

**ಪಾಟೀ ಸವಾಲು – 2 ನೇ ಆರೋಪಿತ ಪರ ವಕೀಲರಿಂದ.**

1) ತನಿಖಾ ಕಾಲದಲ್ಲಿ ಪ್ರಕರಣದಲ್ಲಿ ಸಾಕ್ಷ್ಯ ನುಡಿಯುವಂತೆ ಈ ಮೊದಲು ನಮಗೆ ತನಿಖಾಧಿಕಾರಿಯು ನೋಟೀಸು ನೀಡಿರುವುದಿಲ್ಲ. ಮೊದಲನೇ ಸಾರಿ ನಾನು ಪೋಲೀಸ್ ಠಾಣೆಗೆ 27.12.2018 ರಂದು ಬೆಳಗ್ಗೆ 10.30 ಗಂಟೆಗೆ ಹೋಗಿರುತ್ತೇನೆ. ದಿಃ 27.12. 2018 ರಂದು ಮೊದಲ ಬಾರಿಗೆ ಪಂಚನಾಮೆಯನ್ನು ಪೋಲೀಸರು ಬರೆದಿರುತ್ತಾರೆ. ಪಂಚನಾಮೆಯನ್ನು ಬರೆದ ಪೋಲೀಸರ ಹೆಸರು ನನಗೆ ಗೊತ್ತಿರುವುದಿಲ್ಲ. ಪಂಚನಾಮೆಯನ್ನು ಬರೆಯಲು ಪೋಲೀಸರು ಸುಮಾರು ಅರ್ಧ ಗಂಟೆ ಸಮಯವನ್ನು ತೆಗೆದುಕೊಂಡಿರುತ್ತಾರೆ.

2) ಪಂಚನಾಮೆಯಡಿಯಲ್ಲಿ ಕ್ರಮವಾಗಿ 1, 27 ಮತ್ತು 3 ಅಂದರೆ ಒಟ್ಟು 31 ಮೊಬೈಲ್ ಫೋನಗಳನ್ನು ಆರೋಪಿತರಿಂದ ಜಪ್ತುಪಡಿಸಿಕೊಂಡಿರುತ್ತಾರೆ. ಪೋಲೀಸರು ಒಟ್ಟು ನಾಲ್ಕು ಪಂಚನಾಮೆಗಳನ್ನು ತಯಾರಿಸಿರುತ್ತಾರೆ. ಮೊದಲ ಪಂಚನಾಮೆಯನ್ನು ದಿಃ 27.12. 2018 ರಂದು ತಯಾರಿಸಿರುತ್ತಾರೆ. 2 ನೇ ಪಂಚನಾಮೆಯನ್ನು ದಿಃ 28.12.2018 ರಂದು ತಯಾರಿಸಿರುತ್ತಾರೆ. 2 ನೇ ಪಂಚನಾಮೆಯನ್ನು ಅಂಗಡಿಯ ಮುಂದೆ ಬೆಳಗ್ಗೆ 08.30 ರಿಂದ 09.30 ರ ನಡುವಿನ ಅವಧಿಯಲ್ಲಿ ತಯಾರಿಸಿರುತ್ತಾರೆ. 3 ನೇ ಪಂಚನಾಮೆಯನ್ನು ಅದೇ ದಿನ ನಿಟ್ಟೂರಿನಲ್ಲಿ ಬೆಳಗ್ಗೆ 10-30 ರಿಂದ 12-30 ರ ನಡುವಿನ ಅವಧಿಯಲ್ಲಿ ತಯಾರಿಸಿರುತ್ತಾರೆ. ನಿಟ್ಟೂರಿಗೆ ನಾವು ಪೋಲೀಸ್ ಜೀಪಿನಲ್ಲಿ ಹೋಗಿದ್ದು, ಅದರ ಸಂಖ್ಯೆ ನನಗೆ ಗೊತ್ತಿರುವುದಿಲ್ಲ. ನಿಟ್ಟೂರಿಗೆ ಹೋಗಿ ಅಲ್ಲಿಂದ ಒಂದು ಕಬ್ಬಿನ ಗದ್ದೆಗೆ ಕರೆದುಕೊಂಡು ಹೋಗಿರುತ್ತಾರೆ. ಸದರಿ ಕಬ್ಬಿನ ಗದ್ದೆಯ ಮಾಲಕರ ಹೆಸರು ನನಗೆ ಗೊತ್ತಿರುವುದಿಲ್ಲ. ಸದರಿ ಗದ್ದೆಯ ಚೆಕ್ಕುಬಂದಿ ನನಗೆ ಹೇಳಲು ಬರುವುದಿಲ್ಲ.

3) ನಂತರ ಅಲ್ಲಿ ಕಬ್ಬಿನ ಗದ್ದೆಯ ಒಳಗಿನಿಂದ ಆರೋಪಿತರು ಒಂದು ರಟ್ಟಿನ ಬಾಕ್ಸ ಹೊರ ತೆಗೆದುಕೊಂಡು ಬಂದಿರುತ್ತಾರೆ. ಸದರಿ ರಟ್ಟಿನ ಬಾಕ್ಸನ್ನು ಪೋಲೀಸರು ತೆಗೆದುಕೊಂಡು ಬಂದಿರುತ್ತಾರೆ. ಸದರಿ ರಟ್ಟಿನ ಬಾಕ್ಸನ್ನು ನೆಲದಲ್ಲಿ ಹುಗಿದಿದ್ದು, ಅದನ್ನು ಮುಚ್ಚಿದ್ದರು. ಪಂಚನಾಮೆಯಲ್ಲಿ ಬರೆದಿರತಕ್ಕಂತಹ ಐಟಂಗಳನ್ನು ನನಗೆ ಹೇಳಲು ಬರುವುದಿಲ್ಲ. ಆರೋಪಿತರಿಂದ ಜಪ್ತುಪಡಿಸಿದ ಮುದ್ದೆಮಾಲುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಾರಾ ಎಂಬ ಪ್ರಶ್ನೆಗೆ ಸಾಕ್ಷಿಯು ಪೋಲೀಸರು ಮಾಲೀಕರಿಗೆ ಬಿಟ್ಟು ಕೊಟ್ಟಿರುತ್ತಾರೆ ಎಂದು ಸಾಕ್ಷ್ಯನುಡಿಯುತ್ತಾರೆ.

4) 4 ನೇ ಪಂಚನಾಮೆಯನ್ನು ಪೋಲೀಸರು 28.12.2018 ರಂದು ಸಾಯಂಕಾಲ 05.30 ಗಂಟೆಯ ಸುಮಾರಿಗೆ ತಯಾರಿಸಿರುತ್ತಾರೆ. 4 ನೇ ಪಂಚನಾಮೆಯಡಿಯಲ್ಲಿ ಮುದ್ದೆ ಮಾಲುಗಳನ್ನು ಪೋಲೀಸರು ಯಾರಿಂದ ತಾಬಾಕ್ಕೆ ಪಡೆದುಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಪೋಲೀಸರು ನನ್ನ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ ಪಂಚನಾಮೆಗೆ ಸಹಿಯನ್ನು ಮಾಡಿರುತ್ತೇನೆ. ಸದರಿ ಪಂಚನಾಮೆಯನ್ನು ಪೋಲೀಸರೇ ಬರೆದು ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ. ಸಾಕ್ಷಿಯು ನನಗೆ

ಓದಿ ಹೇಳಿ, ನಮ್ಮ ಸಹಿಯನ್ನು ಪಡೆದುಕೊಂಡಿರುತ್ತಾರೆ ಎಂದು ಸಾಕ್ಷ್ಯ ನುಡಿಯುತ್ತಾರೆ. ನಿಟ್ಟೂರಿನ ಹೊಲದಲ್ಲಿ ಪಂಚನಾಮೆಯನ್ನು ಮಾಡುವ ಕಾಲಕ್ಕೆ ಹೊಲದ ಮಾಲೀಕನನ್ನು ಕರೆದಿರುತ್ತಾರೋ ಎಂಬ ಪ್ರಶ್ನೆಗೆ ಸಾಕ್ಷಿಯ ಕೆಲವೊಬ್ಬರು ಅಲ್ಲಿ ನೆರೆದಿದ್ದರು ಆದರೆ ಹೊಲದ ಮಾಲೀಕ ಬಂದಿರುತ್ತಾನೋ ಇಲ್ಲವೋ ಎಂಬುದು ನನಗೆ ಗೊತ್ತಿಲ್ಲ.

5) ಚಾಸಾ-1 ನನ್ನ ಆತ್ಮೀಯರು ಎಂದರೆ ಸಾಕ್ಷಿಯು ನನ್ನ ಅಂಗಡಿಯ ಆಜು-ಬಾಜಿನ ಅಂಗಡಿಯವರು ಇರುತ್ತಾರೆ ಆದದರಿಂದ ಆತ್ಮೀಯರು ಇರುತ್ತೇವೆ ಎಂದು ಸಾಕ್ಷ್ಯ ನುಡಿಯುತ್ತಾರೆ. ಚಾಸಾ-1 ರವರ ಮಾತನ್ನು ಕಟ್ಟಿಕೊಂಡು ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತೀದ್ದೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಆಗಿರುವುದಿಲ್ಲ ಮತ್ತು ಆರೋಪಿತಲರುಗಳಿಂದ ಯಾವುದೇ ಮುದ್ದೆ ಮಾಲುಗಳನ್ನು ಜಪ್ತುಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಪೋಲೀಸ್ ಠಾಣೆಯಲ್ಲಿ ಪಂಚನಾಮೆಗೆ ಪೋಲೀಸರ ಕೋರಿಕೆಯ ಮೇರೆಗೆ ನನ್ನ ಸಹಿಯನ್ನು ಹಾಕಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ-1 ರವರು ನನ್ನ ಪಕ್ಕದ ಅಂಗಡಿಯವರು ಇರುವುದರಿಂದ ಅವರ ಮಾತನ್ನು ಕೇಳಿಕೊಂಡು ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯನುಡಿಯುತ್ತೀದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು – 1 ನೇ ಆರೋಪಿ ಪರ ವಕೀಲರಿಂದ.**

1 ನೇ ಆರೋಪಿ ಪರ ವಕೀಲರು 2 ನೇ ಆರೋಪಿ ಪರ ವಕೀಲರ ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು ಅನುಮತಿ ಕೋರಿದ್ದು, ಅನುಮತಿಸಲಾಗಿದೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ.

ಸಹಿ/–

ದಿವಾಣಿ ನ್ಯಾಯಾಧೀಶರು,

ಬ್ಯಾಡಗಿ.